ಶ್ರೀ ಎಂ. ವೀರಪ್ಪ ಮೊಯ್ಲಿ.—ಈ ಪ್ರಶ್ನೆಗೆ ಈಗಾಗಲೇ ಉತ್ತರ ಕೊಟ್ಟಿದ್ದೇನೆ ಈಗ ನಾನ್ ಇಂಡಸ್ಟ್ರಿಯಲ್ ಸೊಸೈಟಿಯನ್ನು ರಚನೆ ಮಾಡಬೇಕು ಅಂತ ಯೋಜನೆ ಮಾಡಿದ್ದೀವೆ. ಯಾವ್ಯಾವ ಕಡೆ ಎಂದರೆ ಮಂಡ್ಯ, ಹೊಸಪೇಟೆ, ಕೊಳ್ಳೆಗಾಲ, ಚಿತ್ರದುರ್ಗ, ಮತ್ತು ದಾವಣಗೆರೆಯಲ್ಲಿ. ಇವಕ್ಕೆ ಬ್ಯಾಂಕ್‌ನ ಸಹಾಯ ಕೂಡ ಬೇಕಾಗುತ್ತದೆ. ಬ್ಯಾಂಕ್‌ನಲ್ಲಿ ಸಾಲ ತೆಗೆದುಕೊಂಡು ತಾವ್ಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲೂ ಕೂಡ ಅಲ್ಲಲ್ಲಿ ಇಂಡಸ್ಟ್ರಿಯಲ್ ಸೊಸೈಟಿ ಮಾಡಬೇಕು ಅಂತ ಸರ್ಕಾರದ ಆಕಾಂಕ್ಷೆ ಇದೆ ಆದರೆ ಹಣದ ಅಡಚಣೆಯಿಂದ ಇವತ್ತೆಲ್ಲಾ ಒಂದೇ ವರ್ಷದಲ್ಲಿ ತೆಗೆದುಕೊಳ್ಳುವುದು ಕಾಗುವುದಿಲ್ಲ. ಈ ಬಗ್ಗೆ 1976-77ರ ಸಾಲಿಗೆ ಷಡ್ ಕಟ್ಟಲು ಕನ್‌ಸ್ಟ್ರಕ್ಷನ್ ಕೆಲಸ ತೆಗೆದು ಕೊಳ್ಳುತ್ತೇವೆ. ಎಲ್ಲಾ ಕಡೆಯೂ ಲ್ಯಾಂಡ್‌ನ್ನು ಒಂದೇ ಸಾರಿ ಆಕ್ವೈರ್ ಮಾಡುವುದಕ್ಕಿಂತ ಯಾವ ಯಾವಾಗ ಈ ಇಂಡಸ್ಟ್ರಿಯಲ್ ಸೊಸೈಟಿಗಳನ್ನು ಮಾಡಬೇಕೆಂದಿದ್ದೇವೆಯೋ ಆವಾಗ ತಕ್ಷಣ ಈ ಕಾರ್ಯಕ್ರಮ ಕೈಗೊಳ್ಳುವುದು ಒಳ್ಳೆಯದು. ಅದು ಬಿಟ್ಟು ಒಂದೇ ಸಾರಿ ಲ್ಯಾಂಡ್ ಅಕ್ವೈರ್ ಮಾಡಿಕೊಂಡು ಆದನ್ನು ಹಾಗೆಯೇ ಇಡುವುದಾದರೆ ಅದರಿಂದ ಏನೂ ಪ್ರಯೋಜನವಿಲ್ಲ.

ಶ್ರೀಮತಿ ರಾಧಾಭಟ್.—ಉತ್ತರಕನ್ನಡ ಜಿಲ್ಲೆಯ ಸಿರಾ ಮತ್ತು ಅಂಕೋಲದಲ್ಲಿ ಸಣ್ಣ ಕೈಗಾರಿಕಾ ಕ್ಷೇತ್ರವನ್ನು ಸ್ಥಾಪಿಸಲು ಅರ್ಜಿಗಳು ಏನಾದರು ಬಂದಿವೆಯೇ ? ಬಂದಿದ್ದರೆ ಅಲ್ಲಿ ಆದಷ್ಟು ಬೇಗ ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿರಾ ?

ಅಧ್ಯಕ್ಷರು.—ಅದು ಈ ಪ್ರಶ್ನೆಯಲ್ಲಿ ಬರುವುದಿಲ್ಲ.

ಶ್ರೀ ಟಿ. ಎಂ. ಮಂಜುನಾಥ್.—ಈಗ ಎಲ್ಲಿ ಕೈಗಾರಿಕಾ ಕ್ಷೇತ್ರ ಅಭಿವೃದ್ಧಿ ಗೊಂಡಿದೆಯೋ ಅಲ್ಲಿಯೇ ಮತ್ತೆಮತ್ತೆ ಅದನ್ನು ಅಭಿವೃದ್ಧಿ ಮಾಡುವುದಕ್ಕೆ ಬದಲು ಎಲ್ಲ ಅಭಿವೃಯಾಗಿಲ್ಲವೊ ಅಂತಹ ಕಡೆ ಅಭಿವೃದ್ಧಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿರಾ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಈಗೆ ನಾವು ಪ್ರತಿ ಜಿಲ್ಲೆಯಲ್ಲಿಯೂ ಅಂದರೆ ಎಲ್ಲಿ ಇದುವರೆಗೆ ಕೈಗಾರಿಕಾ ಎಸ್ಟೇಟ್‌ಗಳನ್ನು ರಚನೆ ಮಾಡಿಲ್ಲ, ಅಂತಹಕಡೆಗಳಲ್ಲಿ ಒಂದೊಂದು ಕೈಗಾರಿಕಾಎಸ್ಟೇಟ್ ರಚನೆ ಮಾಡುವಂತಹ ಪಾಲಿಸಿಯನ್ನು ತೆಗೆದುಕೊಂಡಿದ್ದೇವೆ. ಮಂಡ್ಯ ಜಿಲ್ಲೆಯಲ್ಲಿ ಇದುವರೆಗೆ ಇರಲಿಲ್ಲ, ಆದಕಾರಣ ಅಲ್ಲಿ ಒಂದು ಎಸ್ಟೇಟ್ ರಚನೆ ಮಾಡಬೇಕೆಂದು ಯೋಜನೆ ಹಾಕಿಕೊಂಡಿದ್ದೇವೆ.

ಅಧ್ಯಕ್ಷರು.—ಪ್ರಶ್ನೋತ್ತರ ಕಾಲ ಮುಗಿಯಿತು.

Calling Attention to a matter of urgent Public importance.

Re.—harassment in Collecting taxes from public in the Tiptur Taluk.

SRI T.M. MANJUNATH (Tiptur).—I call the attention of the Hon'ble Minister for Revenue to the harassment by the Revenue officials in collecting Taxes from the public in Tiptur Taluk.

SRI N. HUTHCMASTY GOWDA, (Minister for Revenue).— I beg to state as follows :—

In the Calling Attention Notice tabled by the Member, Sri T. M. Manjunath, it is alleged that large-scale harassment was caused by the Revenue officers and officials in collecting several taxes due to Government in Tiptur Taluk. and that undue force and inconvenience is caused to many poor people by attaching properties indiscriminately and selling them.

The matter has been enquired into and that the Deputy Commissioner, has reported that as against the demand of Rs. 18,84 843-91 as on 1-1-1976, hardly a sum of Rs. 4,37,201-35 has been collected,

leaving a balance of Rs. 14,47,642-55. However, coercive action was taken for the recovery of arrears. Even in such cases part payment of the amount due towards the arreras of Loan and other miscellaneous items, is being accepted from the poor and weaker section of the ryots. As such they are not forced to pay the demand in one lumpsum. No property has been sold indiscriminately. Notices have been served and action is being taken for the recovery strictly in accordance with rules. From the above details, it can be said that no undue harassment etc., has been caused to poor ryots during the course of collection of Government dues as alleged by the Member.

ಶ್ರೀ ಟಿ. ಎಂ. ಮಂಜುನಾಥ್.— ಮಾನ್ಯ ಅಧ್ಯಕ್ಷರೇ, ನಾನು ಈ ವರದಿಯನ್ನು ಓದಿ ತಿಳಿದುಕೊಂಡೆ, ಆದರೆ ನಾನು ನನ್ನ ತಾಲ್ಲೂಕಿನಲ್ಲಿ ಪ್ರವಾಸ ಮಾಡಿದಾಗ ಒಬ್ಬರು ರೆವಿನ್ಯೂ ಆಫೀಸರ್ ಕಂದಾಯ ಕೊಡದಿದ್ದವರಿಗೆ ಬಾವಿಯಲ್ಲಿ ನೀರು ಸೇದಲು ಅವಕಾಶ ಕೊಡಬಾರದೆಂದು ಬಾವಿಯ ಬಳಿ ತೋಟ ತಳವಾರರನ್ನು ಕಾವಲು ಹಾಕಿದಾಗ, ಅದು ಗಲಾಟೆಯಾಗಿ ನಂತರ ನೀರು ಸೇದಲು ಅವಕಾಶಕೊಟ್ಟಿದ್ದಾರೆಂದು ತಿಳಿದು ಬಂತು ಈಗ ರೈತರು ಬೆಳೆದಿರುವ ಪದಾರ್ಥಗಳ ಬೆಲೆಗಳು ಕಡಿಮೆಯಾಗಿದೆ, ಆದರೂ 8-10 ವರ್ಷಗಳ ಕಂದಾಯವನ್ನು ಒಟ್ಟಿಗೆ ಕೊಡಬೇಕೆಂದು ಕೇಳುತ್ತಿದ್ದಾರೆ, ನಮ್ಮ ತಿಪಟೂರು ರೈತರಿಗೆ ಹಣ ಕೈಸೇರುವುದು ಜೂನ್ ಮತ್ತು ಜುಲೈ ತಿಂಗಳುಗಳಲ್ಲಿ. ಆದಕಾರಣ ಕಂದಾಯವನ್ನು ವಸೂಲು ಮಾಡುವುದನ್ನು ಆಲ್ಲಿಯವರೆಗೆ ಮುಂದೂಡಬೇಕೆಂದು ಕೇಳಿಕೊಳ್ಳುತ್ತೇನೆ. ಕೆಲವರು 6 ರಿಂದ 8 ಸಾವಿರ ರೂ. ಗಳವರೆಗೆ ಬಾಕಿ ಕೊಡುವುದಿದೆ, ಒಂದು ಸಾವಿರ ಕೊಟ್ಟರೆ ತೆಗೆದುಕೊಳ್ಳುವುದಿಲ್ಲ, ಒಟ್ಟಿಗೆ ಕೊಡ ಬೇಕೆಂದು ಹೇಳುತ್ತಿದ್ದಾರೆ, ಏನಾದರು ಮನೆಗಳಿಂದ ಪಾತ್ರೆಪದಾರ್ಥಗಳನ್ನು ಆಗಲ್ಲೇ ಕಾಯಿ, ಕೊಬ್ಬರಿ ತೆಗೆದುಕೊಂಡು ಹೋದರೆ ಅದಕ್ಕೆ ರಸೀದಿ ಕೊಡುವುದಿಲ್ಲ, ಗಂಡಸರು ಇಲ್ಲದಾಗ ಅಧಿಕಾರಿಗಳು ಮನೆಗೆ ಬಂದರೆ ಹೆಣ್ಣು ಮಕ್ಕಳ ಮೇಲೆ ಹೆರಾಸ್ ಮಾಡುತ್ತಾರೆ, ಹಾಗೆ ಮಾಡುತ್ತೇವೆ ಹೀಗೆ ಮಾಡುತ್ತೇವೆ, ಮನೆ ಜಫ್ತಿ ಮಾಡುತ್ತೇವೆಂದು ಹೇಳುತಾ್ತರೆ, ಇಲ್ಲಿ ಕೊಟ್ಟಿರತಕ್ಕ ವರದಿ ನತ್ಯಕ್ಕೆ ದೂರವಾಗಿದೆ. ಆದಕಾರಣ ಮಾನ್ಯ ಮಂತ್ರಿಗಳು ದೊಡ್ಡ ಮನಸ್ಸು ಮಾಡಿ ಕಂದಾಯ ಬಾಕಿ ಕೊಡುವುದನ್ನು ಜೂನ್ ವರೆಗೆ ಮುಂದಕ್ಕೆ ಹಾಕಬೇಕು ಮತ್ತು ಅಲ್ಪಸ್ವಲ್ಪ ಕಂದಾಯ ಕೊಟ್ಟರೂ ಸಹ ತೆಗೆದುಕೊಳ್ಳುವುದಕ್ಕೆ ಅವಕಾಶವಿರಬೇಕು. ಬಡವರೇ ಆಗಲೀ, ಸ್ವಲ್ಪ ಉತ್ತಮಸ್ಥಿತಿಯಲ್ಲಿರುವ ರೈತರೇ ಆಗಲೀ ಎಲ್ಲರಿಗೂ ಜೂನ್‌ವರೆಗೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಮಾನ್ಯ ಅಧ್ಯಕ್ಷರೇ, ಈ ನೋಟೀಸ್ ಕಳುಹಿಸಿರುವ ಮಾನ್ಯ ಸದಸ್ಯರು ಬಂದಿರತಕ್ಕಂಥ ತಾಲ್ಲೂಕ್‌ನಲ್ಲಿ ಆಹಾರಧಾನ್ಯಗಳನ್ನು ಬೆಳೆಯುವುದರ ಜೊತೆಗೆ ರೈತರು ಸಂಪೃದ್ಧಿಯಾಗಿ ತೆಂಗನ್ನು ಸಹ ಬೆಳೆಯುತಾ್ತರೆ.

ಶ್ರೀ ಟಿ. ಎಂ. ಮಂಜುನಾಥ್.— ಕಳೆದ ಒಂದೂವರೆ ತಿಂಗಳುಗಳಿಂದ ಕೊಬ್ಬರಿ ಹರಾಜು ನಿಂತುಹೋಗಿ ರೈತರಿಗೆ ಬಹಳ ಕಷ್ಟವಾಗಿದೆ,

ಶ್ರೀ ಎನ್. ಹುಚ್ಚಮಾಸ್ತಿಗೌಡ.— ತೆಂಗು ಕೇವಲ ಒಂದು ತಿಂಗಳಿನಲ್ಲಿ ಫಲಕೊಡುವ ವಸ್ತುವಲ್ಲ, ಮೇ ತಿಂಗಳಿನಿಂದ ಪ್ರಾರಂಭವಾದರೆ ಅಕ್ಟೋಬರ್ ತಿಂಗಳವರೆಗೆ ಆದು ಫಲ ಕೊಡುತ್ತದೆ. ಹೊಸ ಫಲ ಏಪ್ರಿಲ್ ತಿಂಗಳಿನಲ್ಲಿ ಬರುತ್ತದೆ. ನಾನು ಸಹ ತೆಂಗಿನಗಿಡ ಹಾಕಿದ್ದೇನೆ, ಆದಕಾರಣ ಅದರ ಅನುಭವ ನನಗಿದೆ, ಮಾನ್ಯ ಅನ್ಯಕ್ಷರಿಗೂ ಗೊತ್ತಿರಬಹುದು, ಸ್ವಲ್ಪ ಮಳೆ ಕಡಿಮೆಯಾದರೂ ಸಹ ಆ ಬೆಳೆ ಪೂರ್ಣವಾಗಿ ನಿರ್ನಾಮವಾಗುವುದಿಲ್ಲ, ಸ್ವಲ್ಪವಾದರೂ ಬೆಳೆಯಾಗುತ್ತದೆ. ಮುಖ್ಯವಾಗಿ ಇಲ್ಲಿ ಕಂದಾಯವನ್ನು ಬಲವಂತವಾಗಿಕೇಳಿದ್ದರೆ ಆದು ವಸೂಲಿಯಾಗುವುದಿಲ್ಲ, ಈಗ 7-8 ವರ್ಷಗಳ ಬಾಕಿ ಇದೆ, ಆದನ್ನು ವಸೂಲ ಮಾಡದಿದ್ದರೆ ಇಲ್ಲಿ ಕೆಲಸಕಾರ್ಯಗಳನ್ನು ನಡೆಸುವುದು ಕಷ್ಟವಾಗುತ್ತದೆ, ಆದಕಾರಣ ನಾವು ಬಲವಂತ ಮಾಡಬೇಕಾಗಿತ್ತು, ಈಗ ಅನುಕೂಲಸ್ಥರದ್ದೇ ಜಾಸ್ತಿ ಬಾಕಿ ಇವೆ, ಅಂತಹವರಿಂದ ವಸೂಲ ಮಾಡುವುದು ತೀರ ಅನಿವಾರ್ಯವೆಂದು ನಾನು ಭಾವಿಸುತ್ತೇನೆ. ಆದರೆ ಸಣ್ಣವರಿಗೆ ಕಿರುಕುಳವಾಗದಂತೆ ಎಚ್ಚರಿಕೆ ಯಿಂದ ಕೆಲಸ ಮಾಡಬೇಕೆಂದು ನಮ್ಮ ಅಧಿಕಾರಿಗಳಿಗೆ ನಾನು ತಿಳಿಸುತ್ತೇನೆ,